

**ಅಭಿವೃದ್ಧಿಯ ನಾಗಾಲೋಟದಲ್ಲಿ ಮತ್ತೆ ಮತ್ತೆ ಬಳಕೆಯಾಗುವ ಪದ 'ಸ್ಮಾರ್ಟ್ ಸಿಟಿ'. ಕರ್ನಾಟಕವೂ ಸೇರಿದಂತೆ ದೇಶದ ಒಂದಷ್ಟು ನಗರಗಳಿಗೆ 'ಸ್ಮಾರ್ಟ್' ಟಚ್ ನೀಡುವ ಪ್ರಯತ್ನಗಳು ನಡೆದಿವೆ. ಆದರೆ, ರೂಪಾಂತರದ ಹೆಸರಿನಲ್ಲಿ ನಡೆದಿರುವ ಈ ಪ್ರಯತ್ನಗಳೆಲ್ಲ ನಿಜವಾಗಿಯೂ 'ಸ್ಮಾರ್ಟ್' ಆಗಿವೆಯೆ? ಇಷ್ಟಕ್ಕೂ ಸ್ಮಾರ್ಟ್ ಸಿಟಿ ಎಂದರೇನು? ಅದು ಹೇಗಿರುತ್ತದೆ? ವಿಶ್ವದ ಮಾದರಿ ಸ್ಮಾರ್ಟ್ ಸಿಟಿಗಳನ್ನು ಪರಿಚಯಿಸುವ ಈ ಬರಹ, ಅವುಗಳ ಅಗತ್ಯದ ಕುರಿತು ಪ್ರಶ್ನೆಗಳನ್ನು ಮುಂದಿಡುತ್ತಲೇ, ಸುಸ್ಥಿರ ನಗರಗಳ ಮಾದರಿಯನ್ನು ನಮ್ಮ ಮುಂದಿಡುತ್ತಿದೆ.**

■ **ಗುರುರಾಜ್ ಎಸ್. ದಾವಣಗೆರೆ**

### ದೃಶ್ಯ 1

ಅಸಾವರಿ ಲೋಖಂಡೆ ಮುಂಬೈ ವಿಶ್ವವಿದ್ಯಾಲಯದ ಲೈಬ್ರರಿಯಲ್ಲಿ ಗ್ರಂಥಪಾಲಕಿ. ಆಕೆ ಪ್ರತಿ ದಿನ ಬೆಳಗ್ಗೆ ಮನೆಯಿಂದ 7ಕ್ಕೆ ನಡೆದೇ ಹೊರಟು ವಿಕ್ಟೋರಿಯಾ ಟರ್ಮಿನಲ್ ತಲುಪಿ, ಅಲ್ಲಿಂದ 30 ನಿಮಿಷಗಳ ಪ್ರಯಾಣ ಮಾಡಿ ಯೂನಿವರ್ಸಿಟಿ ತಲುಪುತ್ತಾಳೆ. ಲೋಕಲ್ ಟ್ರೈನ್‌ನಲ್ಲಿ ವಾರದ ಆರು ದಿನಗಳಲ್ಲಿ ಒಂದೋ ಎರಡು ಸಲ ಕೂರಲು ಜಾಗ ಸಿಗುತ್ತದೆ. ಅಂಥ ದಿನಗಳಲ್ಲಿ ಕೆಲಸ ಮುಗಿಸಿ ಹಿಂತಿರುಗುವಾಗ ದಾರಿ ಬದಿಯ ಅಂಗಡಿಯಲ್ಲಿ ಕೊಂಡ ತರಕಾರಿಗಳನ್ನು ಬ್ಯಾಗಿನಿಂದ ತೆಗೆದು, ನಾಜೂಕಾಗಿ ಸಿಪ್ಪೆ, ನಾರು ಬಿಡಿಸಿ, ರಾತ್ರಿಯ ಅಡುಗೆಗೆ ಅಡ್ವಾನ್ಸ್ ತಯಾರಿ ಟ್ರೈನಿನಲ್ಲಿಯೇ ಮಾಡಿಕೊಳ್ಳುತ್ತಾಳೆ. ಮನೆಗೆ ಬಂದವಳೇ ಕೈಕಾಲು ತೊಳೆದು ಸೀದಾ ಅಡುಗೆ ಮನೆಗೆ ಸೇರಿಕೊಂಡು ಅಡುಗೆ ಮಾಡಲು ಕುಕ್ಕರ್ ಏರಿಸುತ್ತಾಳೆ. ಅಸಾವರಿ ಬರುವುದಕ್ಕೆ ಮುಂಚೆಯೇ ಮನೆಗೆ ಬಂದಿರುವ ಮಕ್ಕಳು ಚಾಕೊಲೇಟ್‌ಗಳಿಗಾಗಿ ಆಯಿಯ ವ್ಯಾನಿಟಿ ಬಾಗ್ ತಡಕಾಡುತ್ತಾರೆ. ಅಷ್ಟರಲ್ಲಿ, 14 ಗಂಟೆಗಳ ಕೆಲಸ ಮಾಡಿ ಮನೆಗೆ ಮರಳುವ ಗಂಡ ಏಕನಾಥ್, 'ಥೋಡಾ ಪೀನೇಕ ಪಾನಿ ದೇನಾ' (ಸ್ವಲ್ಪ ಕುಡಿಯಲು ನೀರು ಕೊಡು) ಎಂದು ಅಸಾವರಿಯನ್ನು ಕೇಳುತ್ತಾನೆ. ಬಟ್ಟೆ ಬದಲಿಸಿ ಟೀವಿಯಲ್ಲಿ ಲೋಕಲ್ ನ್ಯೂಸ್ ನೋಡುತ್ತಿದ್ದಂತೆ ಡೈನಿಂಗ್ ಟೇಬಲ್‌ಗೆ ಕರೆ ಬರುತ್ತದೆ. ಎಲ್ಲರೂ ಊಟ ಮಾಡಿ ಮಲಗುತ್ತಾರೆ. ಮರುದಿನ ಮತ್ತೆ ಅದೇ ದಿನಚರಿ. ಅಸಾವರಿ – ಏಕನಾಥ – ಮಕ್ಕಳು ಎಲ್ಲರಿಗೂ ಇದು ಅಭ್ಯಾಸವಾಗಿದೆ. ಬದಲಾವಣೆ ಬೇಕೆಂದು ಅವರಿಗೆ ಅನ್ನಿಸಿಲ್ಲ.

### ದೃಶ್ಯ 2

ಹರಟೋ ಒಬ್ಬ ಸೆಮಿಕಂಡಕ್ಟರ್ ಎಂಜಿನಿಯರ್. ಈತನ ವಾಸ ಟೋಕಿಯೊ ನಗರದ ನೂರು ಚದರ ಅಡಿಯ ಫ್ಲಾಟಿನಲ್ಲಿ. ನೂರು ಕಿಲೋಮೀಟರ್ ದೂರದ ಚಿಕ್ಕ ಊರಿನಲ್ಲಿ ಅವನ ತಂದೆ–ತಾಯಿ ಇದ್ದಾರೆ. ವಾರಾಂತ್ಯದಲ್ಲಿ ತಂದೆ–ತಾಯಿಯರನ್ನು ನೋಡಲು ಹೋಗುವ ಹರಟೋಗೆ ಅಲ್ಲಿನ ಮನೆಯಲ್ಲಿ ರಾತ್ರಿ ನಿದ್ರೆ ಬರುವುದೇ ಇಲ್ಲ. ಇತ್ತ ಟೋಕಿಯೊದ ಫ್ಲಾಟ್‌ನಲ್ಲಿ ಪ್ರತಿ ರಾತ್ರಿ ಹರಟೋ ಗಡದ್ದು ಎಂಟು ತಾಸಿನ ನಿದ್ದೆ ಹೊಡೆಯುತ್ತಾನೆ. ಪಕ್ಕದ ಹಳಿಗಳ ಮೇಲೆ ಶರವೇಗದಲ್ಲಿ ಹಾಯುವ ಟ್ರೈನುಗಳು ಫ್ಲಾಟನ್ನು ಗಡಗಡ ನಡುಗಿಸುತ್ತವೆ. ಇದು ಹರಟೋನ ನಿದ್ರೆಯನ್ನು ಯಾವತ್ತೂ ಕೆಡಿಸಿಲ್ಲ. ಅಭ್ಯಾಸವಾಗಿಬಿಟ್ಟಿದೆ.

### ದೃಶ್ಯ 3

ಹೆಸರುಘಟ್ಟದ ರೈತ ಲಿಂಗಪ್ಪಣ್ಣ ದಿನ ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು, ಕೂಲಿಗಳೊಂದಿಗೆ ತೋಟಕ್ಕೆ ಹೋಗುತ್ತಾನೆ. ಬದನೆಕಾಯಿ, ಬೆಂಡೆಕಾಯಿ, ಟೊಮ್ಯಾಟೊ, ಹಸಿಮೆಣಸಿನಕಾಯಿಗಳನ್ನು ಬಿಡಿಸಿ ಪುಟ್ಟಿಗಳಲ್ಲಿ ತುಂಬಿಕೊಂಡು ಕೆ.ಆರ್. ಮಾರ್ಕೆಟ್‌ಗೆ ತರಕಾರಿ ತಲುಪಿಸುವ ಗೂಡ್ಸ್ ಗಾಡಿಗಾಗಿ ಮುಖ್ಯರಸ್ತೆಯ ಬದಿ ನಿಂತು ಕಾಯುತ್ತಾನೆ. 'ಕಾರ್ಪೊರೇಟ್ ಕಂಪನಿಯವರೇ ನಿಮ್ಮ ತೋಟದ ಬಳಿ ಬಂದು ತರಕಾರಿಯನ್ನು ಖರೀದಿಸುವ ವ್ಯವಸ್ಥೆ ಇದೆ ಅಲ್ಲವೇ? ಮಾರುಕಟ್ಟೆಗೆ ತಲುಪಿಸುವ ಶ್ರಮ ಏಕೆ?' ಎಂದು ಕೇಳಿದರೆ, 'ಅದಕ್ಕೆಲ್ಲ ಕಂಪ್ಯೂಟರ್‌ನಲ್ಲಿ ಮೊದಲೇ ಬುಕಿಂಗ್ ಮಾಡಬೇಕಂತೆ. ಅದು ನನಗೆ ಬರುವುದಿಲ್ಲ. ಮಾರ್ಕೆಟ್‌ಗೆ ಕಳಿಸುವುದೇ ನನಗೆ ಸುಲಭ' ಎನ್ನುತ್ತಾನೆ. ಅಷ್ಟರಲ್ಲಿ, ಇತರೆ ತೋಟಗಳಿಂದ ತರಕಾರಿ ತುಂಬಿಕೊಂಡು ಬಂದಿರುವ ಗಾಡಿಯ ಡ್ರೈವರ್ ಅಸ್ಲಾಂ, ಲಿಂಗಪ್ಪಣ್ಣನನ್ನು ಕೂಗಿ ಕರೆದು 'ಈ ವಾರದಲ್ಲಿ ಇದು ನಾಲ್ಕನೇ ಲೋಡು ಕಣಪ್ಪ, ನಾನು ಲೆಕ್ಕ ಇಟ್ಟಿದ್ದೀನಿ. ನೀನು ಒಂದು ಕಡೆ ಬರೆದುಕೊಂಡು ಬಿಡು. ವಾರದ ಕೊನೆಗೆ ಬಾಕಿ ಸೆಟಲ್ ಮಾಡ್ತೀನಿ' ಎನ್ನುತ್ತಾನೆ. 'ನಿನ್ ಮೇಲೆ ನಂಗೆ ನಂಬಿಕೆ ಇದೆ ಬಿಡಣ್ಣ' ಎನ್ನುವ ಲಿಂಗಪ್ಪಣ್ಣ ಬಿಸ್ಲಲ್ಲಿ ಜಾಸ್ತಿ ಹೊತ್ತು ಗಾಡಿ ನಿಲ್ಲಿಸ್ಬೇಡ. ಬೇಗ ತಗೊಂಡು ಹೋಗು' ಎಂದು ಹೇಳಿದವನೇ, ತರಕಾರಿ ಬಿಡಿಸಲು ಬಂದವರಿಗೆ ದಿನಗೂಲಿ ಕೊಟ್ಟು